**3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ**

| | |
|---|---|
| ಸಾಕ್ಷಿದಾರರ ಹೆಸರು | **ದುಂಬಿತ್** |
| ತಂದೆಯ ಹೆಸರು | **ದತ್ತಾತ್ರೇಯ** |
| ವಯಸ್ಸು | **17 ವರ್ಷ** |
| ವೃತ್ತಿ | **ವಿದ್ಯಾರ್ಥಿ** |
| ವಾಸಸ್ಥಳ | **ಹಾಸನ** |
| ಪ್ರಮಾಣ ವಚನ ಬೋಧಿಸಿದ ದಿನಾಂಕಃ | **30.04.2026** |

**ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

1) ಚಾಸಾ–1 ನನ್ನ ತಾಯಿ. ಚಾಸಾ–2 ನನ್ನ ಅಕ್ಕ. ಚಾಸಾ–4 ರಿಂದ 8 ನನಗೆ ಗೊತ್ತು. 1ನೇ ಆರೋಪಿ ನನ್ನ ತಂದೆ. 2ನೇ ಆರೋಪಿ ನನ್ನ ತಂದೆಯ ತಾಯಿ. 3ನೇ ಆರೋಪಿ ನನಗೆ ಗೊತ್ತು. ದಿಃ 31.12.2023ರಂದು ಸಂಜೆ 7 ಗಂಟೆ ಸಮಯದಲ್ಲಿ ನಾನು ಚಾಸಾ–1 ಮತ್ತು 2ರವರೊಂದಿಗೆ ಹೊಸ ವರ್ಷ ಆಚರಣೆಗೆಂದು 1ನೇ ಆರೋಪಿಯ ಮನೆಗೆ ಹೋಗಿದ್ದೆವು. ಅಲ್ಲಿ ಒಬ್ಬ ಹೆಂಗಸು ಇದ್ದು ಚಾಸಾ–1ರವರು ಅವರನ್ನು ಪ್ರಶ್ನಿಸಿದಾಗ 1 ಮತ್ತು 2ನೇ ಆರೋಪಿತರು ಚಾಸಾ–1ರವರಿಗೆ ಕೆಟ್ಟ ಪದಗಳಿಂದ ಬೈದು ಬಟ್ಟೆ ಹಿಡಿದು ಎಳೆದಾಡಿ ಕೈಯಿಂದ ಹೊಡೆದರು. ಚಾಸಾ–1ರವರು ಆ ಹೆಂಗಸನ್ನು ಪ್ರಶ್ನಿಸಿದಾಗ ಅವರು ನಿನ್ನನ್ನು ಮತ್ತು ನಿನ್ನ ಮಕ್ಕಳನ್ನು ಬಿಡುವುದಿಲ್ಲ ಎಂದು ಚಾಸಾ–1ರವರಿಗೆ ಬೆದರಿಕೆ ಹಾಕಿದರು. ಆಗ 1ನೇ ಆರೋಪಿ ಪದೇ ಪದೇ ಏಕೆ ಬರುತ್ತೀರಿ ಎಂದು ನಮಗೆ ಬೈದು ಅಲ್ಲಿದ್ದ ಹೆಂಗಸನ್ನು ಕರೆದುಕೊಂಡು ಮಾಡಿದ್ದ ಅಡುಗೆಯನ್ನು ತೆಗೆದುಕೊಂಡು ಎಲ್ಲೋ ಹೋದರು. ಆಗ ನಾನು, ಚಾಸಾ–1 ಮತ್ತು 2ರವರು ಅಲ್ಲೇ ಕುಳಿತು ಅಳುತ್ತಿದ್ದೆವು. ಆಗ ಚಾಸಾ–4ರವರು ಬಂದು ನಮ್ಮನ್ನು ವಿಚಾರಿಸಿದಾಗ ಅವರಿಗೆ ಘಟನೆಯ ಬಗ್ಗೆ ತಿಳಿಸಿದೆವು. ಆನಂತರ ಚಾಸಾ–5ರವರಿಗೆ ಈ ವಿಚಾರವನ್ನು ತಿಳಿಸಿ ನಾನು, ಚಾಸಾ–1 ಮತ್ತು 2ರವರು ಹಿರಿಸಾವೆ ಪೊಲೀಸ್ ಠಾಣೆಗೆ ದೂರು ನೀಡಲು ಹೋಗಿದ್ದು ಚಾಸಾ–1ರವರು ದೂರು ನೀಡಿರುತ್ತಾರೆ. ನಮ್ಮ ಅಪ್ಪನ ಜೊತೆ ಇದ್ದ ಹೆಂಗಸಿನ ಹೆಸರು ಮಾಲಾ. ಆರೋಪಿಗಳು ಈ ದಿನ ಗೈರುಹಾಜರಿದ್ದು ಆರೋಪಿತರ ಗುರುತಿಸುವಿಕೆಗೆ ವಕೀಲರ ತಕರಾರು ಇರುವುದಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ವಾದ ಆಲಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

**<u>ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರವರಿಂದ</u>**

2) ನಾನು ದಿಃ 02.01.2024ರಂದು ಪೊಲೀಸರಿಗೆ ನಮ್ಮ ತಂದೆ ವಿನಾ ಕಾರಣ ನಮ್ಮ ತಾಯಿಯ ಜೊತೆ ಜಗಳ ಮಾಡುವುದು, ಬೈಯ್ಯುವುದು ಮಾಡುತ್ತಿದ್ದರು, ನಮ್ಮ ತಂದೆ ನಮಗೆ ಸರಿಯಾಗಿ ನೋಡಿಕೊಳ್ಳದ ಕಾರಣ ನಾವು ನಮ್ಮ ತಾತನ ಮನೆಯಲ್ಲಿದ್ದೆವು. ನಮ್ಮ ತಂದೆ ರಜಾ ದಿನಗಳಲ್ಲಿ ನಮ್ಮ ತಾತನ ಮನೆಗೆ ಬಂದು ಹೋಗಿ ಮಾಡುತ್ತಿದ್ದರು, ಆಗಾಗ ನಮ್ಮ ತಂದೆಯ ಮನೆಗೆ ಹೋಗಿ ಬಂದು ಮಾಡುತ್ತಿದ್ದೆವು ಆ ಸಮಯದಲ್ಲಿ 1 ಮತ್ತು 2ನೇ ಆರೋಪಿತರು ನಮ್ಮ ತಾಯಿಗೆ ಅವಾಚ್ಯ ಶಬ್ಧಗಳಿಂದ ಬೈಯ್ಯುವುದು, ಹೊಡೆಯುವುದು ಮಾಡುತ್ತಿದ್ದರು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನಮ್ಮ ತಂದೆಯ ಜೊತೆ ಇದ್ದ ಹೆಂಗಸನ್ನು ಮಾಲಾ ಅಲಿಯಾಸ್ ಮಹಾಲಕ್ಷ್ಮಿ ಎಂದು ಕರೆಯುತ್ತಾರೆ, ಅವರೂ ಸಹ ನಮ್ಮ ತಾಯಿಯ ಬಟ್ಟೆ ಹಿಡಿದು ಎಳೆದಾಡಿದರು ಎಂದರೆ ಸರಿ. ಗಲಾಟೆ ಸಮಯದಲ್ಲಿ 1ನೇ ಆರೋಪಿ ಚಾಸಾ–1ರವರಿಗೆ ಪದೇ ಪದೇ ಬರುತ್ತಿರುತ್ತೀಯಾ ನೋಡು ನಿನಗೆ ಮರ್ಡರ್ ಮಾಡುತ್ತೇನೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ವಿ ಕೆ ವಕೀಲರಿಂದಃ</u>**

3) ನಮ್ಮ ತಂದೆ ತಾಯಿ ನಡುವೆ ಮುಂಚೆಯಿಂದಲೂ ಹೊಂದಾಣಿಕೆ ಇರಲಿಲ್ಲ ಎಂದರೆ ಸರಿ. ಹಾಗಾಗಿ ಅವರ ಮದ್ಯೆ ಹೊಂದಾಣಿಕೆ ಪ್ರೀತಿ ವಿಶ್ವಾಸ ಇರಲಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅಮ್ಮನ ಕಡೆಯಿಂದ ಇದೆ ಅಪ್ಪನ ಕಡೆಯಿಂದ ಇಲ್ಲ ಎಂದು ನುಡಿಯುತ್ತಾರೆ. ಹಾಸನದಲ್ಲಿ ನಾವು ವಾಸವಿರುವ ಮನೆ 1ನೇ ಆರೋಪಿ ಕಟ್ಟಿಸಿರುವುದು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಚಾಸಾ–5ರವರು ಕಟ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆ ತಾಯಿಯ ನಡುವೆ ವಿವಾಹ ವಿಚ್ಛೇದನೆ ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ಸಾಕ್ಷಿಯು ಸರಿಯಾಗಿ ಉತ್ತರಿಸದೇ ಇದ್ದುದ್ದರಿಂದ ಸಾಕ್ಷಿಯನ್ನು witness box ನಿಂದ ಹೊರ ಇಳಿಸಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)*

ಓದಿ ಹೇಳಿ ಕೇಳಿ ಸರಿ ಇದೆ

3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ